ಫಣಿಯಮ್ಮನ ಕಣ್ಣು ಕೆಂಪಾಗುತ್ತಿತ್ತು. "ನಂಗೆ ಆ ನಮೂನಿ ಗೊಡ್ಡು ಮೈ ಹೇರ್ಕಂಡಿರ್ಲಿಲ್ಲ..." ಎನ್ನುವ ಮಾತಾಡಿ ಗುಂಡಿಯನ್ನು ಹೀಗಳೆಯಲು ಹಿಂದೆ ಮುಂದೆ ನೋಡುತ್ತಿರಲಿಲ್ಲ ಫಣಿಯಮ್ಮ. ಗುಂಡಮ್ಮ ಅತ್ತೆಯ ಮಾತಿಗೆ ಪ್ರತಿಕ್ರಿಯಿಸಲು ಹೋಗದಿದ್ದರೂ ಅಂತರಂಗದಲ್ಲಿ ವ್ಯಥೆಯಾಗುತ್ತಿತ್ತು. ತಾನೇನೋ ಮನ್ಮಥನ ತುಂಡು ಎನ್ನುವ ಭ್ರಮೆ ಹತ್ತಿದವನಂತೆ ವಿಶ್ವೇಶ್ವರ, 'ತನ್ನ ಕಾಲ ಉಗುರಿಗೆ ಇವಳು ಸರಿಸಾಟಿಯಲ್ಲ' ಎಂಬಂತೆ ಅವಳನ್ನು ನಡೆಸಿಕೊಳ್ಳುತ್ತಿದ್ದ. ಒಟ್ಟಿನಲ್ಲಿ ಆ ಮನೆಯೊಳಗೊಂದು ಅಸಂತುಷ್ಟಿಯ ವಾತಾವರಣ. ಉಬ್ಬೆ ಹಾಕಿದಂತೆ ಉಸಿರುಗಟ್ಟಿಸುವ ತಾಪ.

★★★

ಊರಿನಲ್ಲಿ ಹೊಸದಾಗಿ ಮಾರುತಿಯ ಮಂದಿರ ಸ್ಥಾಪನೆಯಾದ ಮೇಲೆ ನೀಲಕಂಠ ಶಾಸ್ತ್ರಿಗಳ ಮನೆಯ ಚಿತ್ರಣ ಬದಲಾಗುತ್ತಾ ಬಂತು. ಮೂರುಕಾಸಿನ ಕೆಲಸ ಮಾಡದೆ ಯಜಮಾನಿಕೆ ಮಾಡಿಕೊಂಡು ಕಾಲಹರಣ ಮಾಡುತ್ತಿದ್ದ ಫಣಿಯಮ್ಮ ಸ್ವಾಮಿಸೇವೆಗೆ ತಮ್ಮದೇ ಮಾರ್ಗ ಕಂಡುಕೊಂಡರು. ನಾನಾ ಜಾತಿಯ ಹೂವುಗಳನ್ನು ಬೆಳಗಾಮುಂಚೆ ಕುಯ್ದು ತಂದಿಡುವ ಕೆಲಸ ವಿಶ್ವೇಶ್ವರನಿಗೆ ಗಂಟು ಬಿದ್ದರೆ ಅವನ್ನೆಲ್ಲಾ ಅಂದವಾಗಿ ಕಟ್ಟಿ ಮಾರುದ್ದದ ಮಾಲೆ ಮಾಡಿಡುವುದು ಫಣಿಯಮ್ಮನಿಗೆ ಪ್ರಿಯವಾಯ್ತು. ಬಣ್ಣಬಣ್ಣದ ಹೂವುಗಳನ್ನು ಒಂದರೊಡನೆ ಮತ್ತೊಂದನ್ನು ಕಲಾತ್ಮಕವಾಗಿ ಬೆರೆಸಿ ಮಾಲೆ ಕಟ್ಟಿ ಅವು ಮಾರುತಿಯ ವಿಗ್ರಹದ ಮೇಲೆ ಶೋಭಿಸುವುದನ್ನು ನೆನೆದರೆ ಆಸ್ತಿಕ ಮನೋಧರ್ಮದ ಅವರಿಗೆ ಮೈ ರೋಮಾಂಚನವಾಗುತ್ತಿತ್ತು. ಮನಸ್ಸು ಭಾವೋದ್ವೇಗಗೊಂಡು ಕಣ್ಣು ಮಂಜಾಗುತ್ತಿತ್ತು. ನಂದಾದೀಪಕ್ಕೆ, ಆರತಿ ಬೆಳಗಲಿಕ್ಕೆ ಹೂಬತ್ತಿಯ ಕಟ್ಟುಕಟ್ಟುಗಳನ್ನು ಹೊಸೆದಿಡುವುದು, ನಾನಾವಿಧದ ಚಿತ್ತಾಕರ್ಷಕ ಗೆಜ್ಜೆವಸ್ತ್ರಗಳನ್ನು ಮಾಡಿ ಅವುಗಳಿಗೆ ಸಂತದ ತಗಡಿನ ಬಣ್ಣದ ಬೇಗಡೆಗಳನ್ನು ಅಂಟಿಸುವುದು, ಹೀಗೆ ಕೂತಲ್ಲೇ ಮಾಡುವ ಕರಕುಶಲ ಕೆಲಸ ಅಂಟಿಸಿಕೊಂಡು ಗೆಲುವಾದರು ಫಣಿಯಮ್ಮ. ದೇವರು ಕಣ್ಣು ಬಿಟ್ಟ ಅಂದರೆ ಮನೆ ನಂದಗೋಕುಲವಾಗಲು ಎಷ್ಟು ಹೊತ್ತು?



ಹನುಮನ ಮಹಿಮೆ ಇದ್ದೂರನ್ನು ದಾಟಿ ಪರವೂರುಗಳಲ್ಲಿ ಹಬ್ಬಿ ಹರಡುತ್ತಿದ್ದಂತೆ ಗುಂಡಮ್ಮನ ಗೆಯ್ಮೆ ಹೆಚ್ಚುತ್ತಾ ಬಂತು. ಹಿಟ್ಟು ರುಬ್ಬುವುದು, ವಡೆ ಕರಿಯುವುದು, ಪನಿವಾರದ ತಯಾರಿ ಇತ್ಯಾದಿ ಹೆಚ್ಚುವರಿ ಕೆಲಸಗಳಲ್ಲಿ ಅವಳು ಹಣ್ಣಾಗತೊಡಗಿದಳು. ಪುರುಸೊತ್ತಾಗಿರುತ್ತಿದ್ದ ಊರಿನ ಕೆಲ ಹೆಂಗಸರು ಗುಂಡಮ್ಮನ ಸಹಾಯಕ್ಕೆ ಸ್ವಇಚ್ಛೆಯಿಂದ ಹಾಜರಿ ಹಾಕತೊಡಗಿದ ಮೇಲೆ ಗುಂಡಮ್ಮನ ತಲೆಭಾರ ಒಂದಲ್ಪ ಇಳಿಯಿತು. ಹೀಗೆ ಎಲ್ಲಾ ವ್ಯವಸ್ಥೆಗಳೂ ಕಾಲಕ್ರಮೇಣ ಒಂದು ನಿಯಮಕ್ಕೆ ಒಳಪಟ್ಟುವು. ಸಲೀಸಾಗಿ ನಡೆಯತೊಡಗಿದುವು.

★★★

ವರ್ಷಗಳು ಉರುಳುತ್ತಾ ಬಂದಂತೆ ದೇವಸ್ಥಾನದ ವಿಚಾರದಲ್ಲಿ ಒಡಕು ಸ್ವರಗಳು ಕೇಳಿ ಬರತೊಡಗಿದುವು. ಪ್ರಸಾದದ ತಯಾರಿಯೇನೋ ಶಾಸ್ತ್ರಿಗಳ ಮನೆಯಲ್ಲಿ ನಡೆಯುತ್ತದೆ. ಆದರೆ, ಬಂದ ಭಕ್ತಾದಿಗಳಿಗೆ ಅದನ್ನು ಹಂಚುವ ವಿಷಯದಲ್ಲಿ ಒಂದು ಜಾತಿಯವರು ಮಾತ್ರಾ ಹಸ್ತಕ್ಷೇಪ ಮಾಡುವುದು ಸರಿಯೇ? ಸರ್ವರಿಗೂ ಸಮಾನ ಹಕ್ಕು ಇರುವ ದೇವಸ್ಥಾನದಲ್ಲಿ ಯಜಮಾನಿಕೆ ಯಾಕೆ? ಪ್ರಸಾದವನ್ನು ದೊನ್ನೆಗೆ ತುಂಬಿ ದೊಡ್ಡ ದೊಡ್ಡ ಪರಾತಗಳಲ್ಲಿ ವಿತರಣೆಗೆ ಜೋಡಿಸುವುದಾಗಲೀ, ಸರತಿಯ ಸಾಲಲ್ಲಿ ಬರುವವರಿಗೆ ಹಂಚುವುದಾಗಲೀ, ವಿಶ್ವೇಶ್ವರನ ಮೇಲುಸ್ತುವಾರಿಯಲ್ಲಿ ಅವರವರೇ ನಡೆಸಬೇಕೆಂದು ಕಾನೂನಿದೆಯಾ? ಹಂಚುತ್ತೇವೆ ನಾವೂ. ದೇವಸ್ಥಾನದ ನಿರ್ಮಾಣ ಕಾರ್ಯದಲ್ಲಿ ನಾವೂ ದೊಡ್ಡ ಮಟ್ಟದ ದೇಣಿಗೆ ಕೊಟ್ಟಿದ್ದೇವೆ. ದೊಡ್ಡ ಪ್ರಮಾಣದಲ್ಲಿ ಸೇವಾರ್ಥ ನಡೆಸುತ್ತಿದ್ದೇವೆ. 'ಜಾತಿಭೇದ ಮಾಡಬಾರದು, ಅದು ಶಿಕ್ಷಾರ್ಹ ಅಪರಾಧ' ಎನ್ನುವ ಹೇಳಿಕೆ ಏನೇ ಇದ್ದರೂ